ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ, (ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 6 ಚಾ ಸಾ 7

ಹೆಸರುಃ ರವಿಕುಮಾರ್

ತಂದೆಯ ಹೆಸರುಃ ಪಾಪಯ್ಯ

ವಯಸ್ಸುಃ 45 ವರ್ಷ

ಉದ್ಯೋಗಃ ಆಟೋ ಚಾಲಕ

ವಾಸಃ ಮೇಟಗಹಳ್ಳಿ, ಮೈಸೂರು.

ದಿಃ 23.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

1. ನಾನು ಆಟೋ ಚಾಲಕನಾಗಿ ಕೆಲಸ ಮಾಡುತ್ತೇನೆ. ನಾನು ಪ್ರತಿದಿನ ಬೆಳಿಗ್ಗೆ 5, 5-30 ಗಂಟೆಗೆ ಬಂದು ನನ್ನ ಆಟೋವನ್ನು ಬಾಡಿಗೆಗಾಗಿ ಮೇಟಗಳ್ಳಿಯ ಸ್ಕೂಲ್ ಪಕ್ಕದಲ್ಲಿ ನಿಲ್ಲಿಸುತ್ತೇನೆ.

2. ದಿಃ 06.02.2022 ರಂದು ಭಾನುವಾರದ ದಿವಸ ಬೆಳಿಗ್ಗೆ 5-30 ಗಂಟೆಗೆ ನಾನು ಆಟೋ ಸ್ಟಾಂಡ್ ಗೆ ಹೋಗಿದ್ದೆ, ಅಲ್ಲಿ

ಬಾಡಿಗೆಗೆ ಕಾಯುತ್ತಿದ್ದಾಗ 6, 6-10 ಗಂಟೆ ಸಮಯದಲ್ಲಿ ಕೆ.ಆರ್. ಎಸ್ ನ 303 ಸಂಖ್ಯೆಯ ಬಸ್ಸು ಬಂತು. ಆ ಬಸ್ಸಿನಿಂದ ಇಳಿದು ಒಬ್ಬ ಹೆಂಗಸು ಕೈಯಲ್ಲಿ ಬ್ಯಾಗ್ ಅನ್ನು ಹಿಡಿದುಕೊಂಡು ಬಂದು ಬೆಲವತ್ತ ಗ್ರಾಮಕ್ಕೆ ಹೋಗಬೇಕು ಎಂದು ನನ್ನನ್ನು ಕೇಳಿದಳು.

3. ಆಗ ನಾನು ಬಾಡಿಗೆ ರೂ. 80/- ಆಗುತ್ತದೆ ಎಂದು ಹೇಳಿದೆ. ಅದಕ್ಕೆ ಆಕೆ ಬಾಡಿಗೆ ರೂ. 60/- ಕೊಡುತ್ತೇನೆ ಎಂದು ಹೇಳಿದರು. ನಾನು ಅದಕ್ಕೆ ಒಪ್ಪಿ ಆಕೆಯನ್ನು ಬೆಲವತ್ತ ಗ್ರಾಮಕ್ಕೆ ಕರೆದುಕೊಂಡು ಹೋಗಿ ಒಂದು ದೇವಸ್ಥಾನದ ಹತ್ತಿರ ಬಿಟ್ಟು ನಾನು ವಾಪಸ್ಸು ಮೇಟಗಳ್ಳಿಗೆ ಬಂದೆ.

4. ಎರಡು ದಿವಸಗಳ ನಂತರ ಪೊಲೀಸರು ನನ್ನನ್ನು ಹುಡುಕಿಕೊಂಡು ಬಂದಿದ್ದಾರೆ ಎಂಬ ವಿಚಾರ ಗೊತ್ತಾಯಿತು. ಪೊಲೀಸರು ಬಂದು ಬೆಳಗ್ಗಿನ ಜಾವದಲ್ಲಿ ಆ ಸ್ಟಾಂಡ್ ಗೆ ಯಾರ ಯಾರ ಆಟೋಗಳು ಬರುತ್ತವೆ ಎಂದು ಕೇಳಿದಕ್ಕಾಗಿ ನಮ್ಮ ಮೂರು ಜನರ ಹೆಸರುಗಳನ್ನು ಹೇಳಿ ಮೊಬೈಲ್ ಸಂಖ್ಯೆಗಳನ್ನು ಕೊಟ್ಟಿದ್ದರು.

5. ನನ್ನ ಸ್ನೇಹಿತರು ಪೇಪರ್ ತೋರಿಸಿದಾಗ ಒಂದು ಹೆಂಗಸು ಮತ್ತು ನಾಲ್ಕು ಜನ ಮಕ್ಕಳನ್ನು ಕೊಲೆ ಮಾಡಲಾಗಿದೆ ಎಂಬ ವಿಚಾರ ಗೊತ್ತಾಯಿತು. ಆ ಪೇಪರ್ ನಲ್ಲಿ ಕೊಲೆ ಮಾಡಿದ ಹೆಂಗಸಿನ ಪೋಟೋ ಇತ್ತು. ಸದರಿ ಹೆಂಗಸನ್ನು ನಾನು ಆ ದಿನ ಬೆಳಿಗ್ಗೆ

ಮೇಟಗಳ್ಳಿಯಿಂದ ಬೆಲವತ್ತ ಗ್ರಾಮಕ್ಕೆ ಬಿಟ್ಟಿದ್ದೇನೆ ಎಂಬ ವಿಚಾರ ಗೊತ್ತಾಯಿತು.

6. ನನ್ನನ್ನು ಪೊಲೀಸರು ಶ್ರೀರಂಗಪಟ್ಟಣದ ಡಿ ವೈ ಎಸ್ ಪಿ ಕಛೇರಿಗೆ ಕರೆಸಿರುತ್ತಾರೆ. ಆ ರೀತಿ ನಾನುಕಛೇರಿಗೆ ಹೋದಾಗ ನನಗೆ ಸದರಿ ಹೆಂಗಸಿನ ಪೋಟೋವನ್ನು ತೋರಿಸಿರುತ್ತಾರೆ. ನಾನು ಸದರಿ ಪೋಟೋವನ್ನು ನೋಡಿ ಈ ಹೆಂಗಸು ನನ್ನ ಆಟೋದಲ್ಲಿ ಬಾಡಿಗೆಗೆ ಬಂದಿದ್ದರು ಎಂದು ತಿಳಿಸಿದೆ. ಸದರಿ ಹೆಂಗಸನ್ನು ನೋಡಿದರೆ ಗುರುತಿಸುತ್ತೇನೆ.

7. **(ಈ ಹಂತದಲ್ಲಿ WhatsApp vedio call ಮುಖಾಂತರ ಆರೋಪಿಯನ್ನು ತೋರಿಸಲಾಯಿತು.)** ಸದರಿ WhatsApp vedio call ನಲ್ಲಿರುವ ಆರೋಪಿ ಲಕ್ಷ್ಮಿಯನ್ನು ಸಾಕ್ಷಿ ನೋಡಿಕೊಂಡು ಇದೇ ಹೆಂಗಸನ್ನು ನಾನು ಆ ದಿವಸ ನೋಡಿರುತ್ತೇನೆ ಎಂದು ಉತ್ತರಿಸಿದ್ದಾರೆ.

8. ನಾನು ಎಲ್ಲಾ ವಿಚಾರವನ್ನು ಡಿ ವೈ ಎಸ್ ಪಿ ಮತ್ತು ನ್ಯಾಯಾಧೀಶರವರ ಮುಂದೆ ತಿಳಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಎಸ್ ಆರ್ ಎಸ್ ವಕೀಲರಿಂದಃ-**

9. ಕೆ.ಆರ್.ಎಸ್. ನಿಂದ ಬರುವ ಬಸ್ಸು ಮೇಟಗಳ್ಳಿಯಿಂದ

ಮೊದಲೇ ಸಿಗುವ ರಿಂಗ್ ರೋಡ್ ಜಂಕ್ಷನ್ ನಲ್ಲಿ ಸಿಗುತ್ತವೆ ಎನ್ನುವುದು ಸರಿ. ಆ ಸ್ಟಾಪ್ ಗಿಂತ ಹಿಂದೆ ಇರುವ ಮೊಗರಹಳ್ಳಿ ಮಂಟಿಯಲ್ಲೂ ಕೂಡ ಅ ಬಸ್ಸಿಗೆ ನಿಲುಗಡೆ ಇದೆ. ಮೊಗರಹಳ್ಳಿ ಮಂಟಿಯಿಂದಲು ಸಾದನಹಳ್ಳಿ ಮಾರ್ಗವಾಗಿ ಬೆಲವತ್ತ ಗ್ರಾಮಕ್ಕೆ ಹೋಗಬಹುದು ಎನ್ನುವುದು ಸರಿ, ಆದರೆ ಅಲ್ಲಿಗೆ ವಾಹನದ ವ್ಯವಸ್ಥೆ ಕಡಿಮೆ.

10. ರಿಂಗ್ ರೋಡ್ ಜಂಕ್ಷನ್ ನಿಂದಲೂ ಬೆಲವತ್ತಮಂಟಿಗೆ ಹೋಗಬಹುದು ಎಂಬ ಪ್ರಶ್ನೆಗೆ ಸಾಕ್ಷಿಯು ಹೋಗಬಹುದು ಆದರೆ ಅಷ್ಟು ಹೊತ್ತಿನಲ್ಲಿ ಅಲ್ಲಿ ವಾಹನ ಸಿಗುವುದಿಲ್ಲ ಎಂದು ಉತ್ತರಿಸಿದ್ದಾರೆ.

11. ಪೊಲೀಸಿವರು 8ನೇ ತಾರೀಕಿನಂದು ನಮ್ಮ ಆಟೋ ನಿಲ್ದಾಣಕ್ಕೆ ಬಂದು ನನ್ನ ಸ್ನೇಹಿತರನ್ನು ವಿಚಾರಿಸಿ ನನ್ನ ಫೋನ್ ನಂಬರ್ ಅನ್ನು ತೆಗೆದುಕೊಂಡಿದ್ದಾರೆ. ಸದರಿ ಆಟೋವನ್ನು ಚಲಾಯಿಸಲು ನನಗೆ ಪರವಾನಗಿ ಇದೆ ಮತ್ತು ಆ ಆಟೋ ನನಗೆ ಸೇರಿದ್ದು ಎಂಬ  ಸಂಬಂಧವಾಗಿ ಪೊಲೀಸರು ನನ್ನಿಂದ ದಾಖಲೆಗಳನ್ನು ಪಡೆದುಕೊಂಡಿಲ್ಲ.

12. ನಾವು ಆಟೋ ರಿಕ್ಷಾದ ಮೀಟರ್ ರೀಡಿಂಗ್ ಆಧಾರದಲ್ಲಿ ಬಾಡಿಗೆಯನ್ನು ಪಡೆಯುವುದು ನಿಯಮ ಎನ್ನುವುದು ಸರಿ. ಆ ದಿವಸ ನಾನು ಮೀಟರ್ ಹಾಕಿಲ್ಲ. ಸಾಕ್ಷಿಯು ಮುಂದುವರೆದು ಎಷ್ಟು ಆಗುತ್ತದೆ ಎಂದು ಇಲ್ಲಿಯೇ ಹೇಳಿ ಎಂದು ತಿಳಿಸಿರುತ್ತಾರೆ, ಅದಕ್ಕೆ

ಹಾಕಿಲ್ಲ ಎಂದು ಉತ್ತರಿಸಿರುತ್ತಾರೆ.

13. ನಾವು ಆಟೋ ನಿಲ್ಲಿಸುವ ಪಕ್ಕದಲ್ಲಿರುವ ಶಾಲೆಯಲ್ಲಿ ಸಿಸಿ ಕ್ಯಾಮೆರಾದ ವ್ಯವಸ್ಥೆ ಇದೆ ಎನ್ನುವುದು ಸರಿ. ಮೇಟಗಳ್ಳಿಯಿಂದ ಬೆಲವತ್ತ ಗ್ರಾಮಕ್ಕೆ ಅಂದಾಜು 4 ಕಿ. ಮೀ. ದೂರ. ಬೆಲವತ್ತಗ್ರಾಮಕ್ಕೆ ಮೇಟಗಳ್ಳಿ ಗ್ರಾಮದಿಂದ ಬಸ್ಸಿನ ವ್ಯವಸ್ಥೆ ಇರುವುದಿಲ್ಲ. ಸದರಿ 4 ಕಿ. ಮೀ. ದೂರವನ್ನು ಕ್ರಮಿಸಲು 15-20 ನಿಮಿಷ ತಗುಲಿರಬೇಕು, ಆ ರಸ್ತೆ ಸರಿ ಇರುವುದಿಲ್ಲ.

14. ನನ್ನನ್ನು ಪೊಲೀಸರು ಕರೆದುಕೊಂಡು ಬಂದು ವಿಚಾರಣೆ ಮಾಡಿದ ದಿವಸವೇ ಆಂದೋಲನ ದಿನ ಪತ್ರಿಕೆಯಲ್ಲಿ ಆ ಹೆಂಗಸಿನ ಫೋಟೋವನ್ನು ನೋಡಿರುತ್ತೇನೆ. ಆ ಪೇಪರ್ ಅನ್ನು ಯಾವ ತಾರೀಕಿನಂದು ನೋಡಿದ್ದೇನೆ ಎಂದು ನನಗೆ ಗೊತ್ತಿಲ್ಲ, ಆದರೆ ಆ ವಿಚಾರಗಳು ಎರಡು ಮೂರು ದಿನಗಳ ದಿನಪತ್ರಿಕೆ ಮತ್ತು ಟಿ ವಿ ಯಲ್ಲಿ ಬಂದಿರುತ್ತದೆ.

15. ಸದರಿ ಹೆಂಗಸಿನ ಫೋಟೋವನ್ನು ನಾನು ಆಂದೋಲನ ದಿನ ಪತ್ರಿಕೆಯಲ್ಲಿ ಮತ್ತು ಟಿ ವಿ ಯಲ್ಲಿ ನೋಡಿದ್ದೇನೆ ಎಂದು ಪೊಲೀಸರು ಅಥವಾ ನ್ಯಾಯಾಧೀಶರ ಮುಂದೆ ಹೇಳಲಿಲ್ಲ, ಕಾರಣ ಅವರು ಕೇಳಲಿಲ್ಲ.

16. ಸಾಮಾನ್ಯವಾಗಿ ಬರುವ ಎಲ್ಲಾ ಗ್ರಾಹಕರ ಪರಿಚಯ

ಇಟ್ಟುಕೊಳ್ಳುವ ಸಾಧ್ಯತೆ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಆಟೋಗೆ ಬಂದವರನ್ನು ನಾನು ಗುರುತಿಸಬಲ್ಲೆ ಎಂದು ಸಾಕ್ಷಿ ನುಡಿಯುತ್ತಾರೆ. ಮೇಟಗಳ್ಳಿಯಲ್ಲಿ ಆಟೋ ಚಾಲಕರ ಸಂಘ ಇರುವುದಿಲ್ಲ.

17. ನನ್ನ ಪೋನ್ ನಂಬರ್ ಮತ್ತು ವಿವರವನ್ನು ನನ್ನ ಸ್ನೇಹಿತ ಆಟೋ ಚಾಲಕ ಶ್ರೀನಿವಾಸಮೂರ್ತಿ ಪೊಲೀಸರಿಗೆ ಕೊಟ್ಟಿರುತ್ತಾನೆ.

18. ನನ್ನ ಆಟೋದಲ್ಲಿ ಆರೋಪಿಯನ್ನು ಹೊರತುಪಡಿಸಿ ಬೇರೆಯವರೂ ಕೂಡ ಬೆಲವತ್ತಕ್ಕೆ ಪ್ರಯಾಣಿಸಿದ್ದಾರೆ ಎಂದರೆ ಆ ದಿವಸ ಆ ಹೆಂಗಸನ್ನು ಹೊರತುಪಡಿಸಿ ಬೇರೆ ಯಾರೂ ಪ್ರಯಾಣಿಸಿಲ್ಲ. ಆ ದಿವಸ 303 ರ ಬಿಸ್ಸಿನಲ್ಲಿ ಎಷ್ಟು ಜನರು ಇಳಿದರು ಎಂದು ನನಗೆ ಗೊತ್ತಿಲ್ಲ, ಆದರೆ ನಾನು ಟೀ ಕುಡಿಯುತ್ತಿದ್ದಾಗ ಆ ಹೆಂಗಸು ನನ್ನ ಆಟೋ ಬಳಿ ಬಂದಿದ್ದಾಳೆ.

19. ನಾನು ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ಕೊಡುವಾಗ ಆಕೆ ಕಂಪು ಹಳದಿ ಬಣ್ಣದ ಸೀರೆ ಧರಿಸಿದ್ದಳು ಎಂದು ತಿಳಿಸಿರುತ್ತೇನೆ.

20. ಈಗ ನಾನು ನೋಡಿದ ಆರೋಪಿ ಲಕ್ಷ್ಮೀ ನನ್ನ ಆಟೋದಲ್ಲಿ ಯಾವತ್ತೂ ಪ್ರಯಾಣಿಸಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರ ಒತ್ತಡಕ್ಕೆ ಮಣಿದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎನ್ನುವುದು ಸರಿಯಲ್ಲ. ನಾನು ಆರೋಪಿಯನ್ನು ಯಾವತ್ತೂ ನೋಡದೇ ಇದ್ದರೂ ಕೂಡ 6 ನೇ ತಾರೀಕಿನಂದು ನೋಡಿದ್ದೇನೆ ಎಂದು ನಾನು ಸುಳ್ಳು ಹೇಳಿದ್ದೇನೆ

ಎನ್ನುವುದು ಸರಿಯಲ್ಲ.

ಮರು ವಿಚಾರಣೆ : ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)